


**ಗುಂಡ:** ಯಾಕೋ ತಿಮ್ಮ ಬೇಜಾರಲ್ಲಿದ್ದೀಯಾ?
**ತಿಮ್ಮ:** ನನ್ನ ಹೆಂಡತಿ ನನ್ನ ಕೆನ್ನೆಗೆ ಹೊಡೆದಳು. ಅದಕ್ಕೆ ಬೇಜಾರಲ್ಲಿದ್ದೀನಿ.
**ಗುಂಡ:** ತಿರುಗಿಸಿ ನೀನೂ ಹೊಡೆಯಬೇಕಿತ್ತು.
**ತಿಮ್ಮ:** ನಾನು ಹೊಡೆದದ್ದಕ್ಕೆ ಅವಳೂ ಹೊಡೆದಿದ್ದು.

**ಗುಂಡ:** ಯಾಕೋ ತಿಮ್ಮ ತುಂಬ ಹೆದರಿಕೊಂಡಂಗಿದ್ದೀಯಾ?
**ತಿಮ್ಮ:** ಮಾರಾಯ ಮೆತ್ತಗೆ ಮಾತಾಡು.
**ಗುಂಡ:** ಯಾಕೋ ಅಂಥದ್ದೇನಾಯ್ತು?
**ತಿಮ್ಮ:** ನನ್ನ ಹೆಂಡ್ತಿ ತವರು ಮನೆಯಿಂದ ಬಂದಿದಾಳೆ.

**ಗುಂಡ:** ನಿನ್ನೆ ಕ್ಲಾಸಿನಲ್ಲಿ ಮೇಷ್ಟು ನಿನ್ನ ಹೊಡೆದರಂತಲ್ಲ?
**ತಿಮ್ಮ:** ಹೌದು ಎಲ್ಲರೆದುರಿಗೇ ಹೊಡೆದ್ರು.
**ಗುಂಡ:** ಯಾಕೆ ಹೊಡೆದ್ರು?
**ತಿಮ್ಮ:** ನೀವು ಮಾಡಿದ ಪಾಠ ತಿಳಿಯಲ್ಲ ಅಂದೆ.

**ಗುಂಡ:** ಮೊನ್ನೆ ನಮ್ಮ ಪಾರ್ಟಿಯವರು ನನ್ನ ಮುಖ್ಯಮಂತ್ರಿ ಆಗ್ತೀಯಾ ಅಂತ ಕೇಳಿದ್ರು.
**ತಿಮ್ಮ:** ನೀನು ಏನು ಹೇಳಿದೆ?
**ಗುಂಡ:** ನಾನು ಆಗಲ್ಲ ಅಂದೆ.
**ತಿಮ್ಮ:** ಯಾಕೆ?
**ಗುಂಡ:** ನಾಳೆ ಎಲೆಕ್ಷನ್ ಇಟ್ಕೊಂಡ್ರೆ ಯಾವ ಪುರುಷಾರ್ಥಕ್ಕೆ ನಾನು ಸಿಎಂ ಆಗಲಿ?

**ತಿಮ್ಮ:** ಏನೋ ನಿನ್ನ ಹೆಂಡತಿ ತುಂಬ ಪ್ರೀತಿಸ್ತಾಳಂತೆ ಹೌದಾ?
**ಗುಂಡ:** ಹೌದಯ್ಯಾ, ಪ್ರೀತಿಸ್ತಾಳೆ. ಆದರೆ ಯಾರನ್ನ ಪ್ರೀತಿಸುತ್ತಾಳೆ ಅನ್ನೋದೇ ಗೊತ್ತಾಗ್ತಿಲ್ಲ.

**ಆತ:** ಅರೇ, ಹಂದಿ ಜೊತೆ ವಾಕಿಂಗ್ ಹೊರಟಿದ್ದೀಯಲ್ಲ.
**ಈತ:** ಕಾಣೋದಿಲ್ವೇನೋ ಇದು ಹಂದಿಯಲ್ಲ ಕುರಿ.
**ಆತ:** ನಾನು ನಿನ್ನನ್ನು ಕೇಳಲಿಲ್ಲ ಕುರಿಯನ್ನು ಕೇಳಿದೆ.

**ಗುಂಡ:** ಲೇ ಗುಂಡ, ಹೋದ ವಾರ ಮುಖ್ಯಮಂತ್ರಿಗಳನ್ನು ನೋಡಲು ಬೆಂಗಳೂರಿಗೆ ಹೋಗಿದ್ದೆಯಂತೆ?
**ತಿಮ್ಮ:** ಹೌದು ಹೋಗಿದ್ದೆ.
**ಗುಂಡ:** ಮತ್ತೆ ಕಂಡ್ರಾ?
**ತಿಮ್ಮ:** ಹೂಂ, ವಿಧಾನಸೌದದಲ್ಲೇ ಇದ್ರು.

**ಗುಂಡ:** ಯಾವನೋ ಕಳ್ ನನ್ಮಗ, ನಮ್ಮ ಭತ್ತದ ಬಣವಿಗೆ ಬೆಂಕಿ ಹಚ್ಚಿದಾನೆ.
**ತಿಮ್ಮ:** ಮತ್ತೆ ಅದು ನಮ್ದಾ?
**ಗುಂಡ:** ಮತ್ಯಾರ್ದಲಾ?
**ತಿಮ್ಮ:** ನಾನು ಪಕ್ಕದ ಮನೆಯವರ ಬಣವಿ ಅಂತ ತಿಳ್ಕೊಂಡು ಬೆಂಕಿ ಹಚ್ಚಿದೆ.

ಹಿಟ್ಲರ್ ಕುರಿತ ಪಾಠ ಬೋಧನೆಯನ್ನು ಮುಗಿಸಿ ಶಿಕ್ಷಕರು ಮಕ್ಕಳಿಗೆ ಪ್ರಶ್ನೆ ಕೇಳತೊಡಗಿದರು.
**ಶಿಕ್ಷಕ:** ತಿಮ್ಮ ನಿಮ್ಮ ಮನೆಯಲ್ಲಿ ಹಿಟ್ಲರ್ ಯಾರು ಅಂತೀರಿ?
**ತಿಮ್ಮ:** ನಮ್ಮಮ್ಮನೇ ಸರ್, ಯಾಕಂದ್ರೆ ನಮ್ಮಪ್ಪನೂ ಅಮ್ಮನಿಗೆ ಹೆದರಿಕೊಳ್ತಾನೆ.


**ಗುಂಡ:** ದಡ್ಡರು ಬುದ್ಧಿವಂತರಾಗುವುದು ಹೇಗೆ ಅಂತ ಪುಸ್ತಕ ಬಂದಿದೆ ಸರ್.
**ಶಿಕ್ಷಕ:** ಹೌದಾ, ಹಾಗಾದ್ರೆ ನೀನೇ ಅದನ್ನು ಓದು.
**ಗುಂಡ:** ಸರ್, ನಮ್ಮಪ್ಪ ಇದನ್ನು ನಿಮಗೆ ಕೊಡಲು ಹೇಳಿದ್ದಾರೆ ತಗೊಳ್ಳಿ.

ಸಂಗ್ರಹ: ಪ್ರಕಾಶ ಎಸ್. ಮನ್ನಂಗಿ, ಮೋಟೆಬೆನ್ನೂರು

**ಅಶೋಕ:** ಸಾಗರ್ ಈ ಕ್ಲಬ್‌ನಲ್ಲಿ ಕೆಲವರು ಹೆಚ್ಚಿನ ಸಮಯವನ್ನು ಇಲ್ಲಿಯೇ ಕಳೆಯುತ್ತಾರಲ್ಲ?
**ಸಾಗರ್:** ಹೌದು, ಅವರಿಗೆಲ್ಲ ಮದುವೆಯಾಗಿದೆ.

**ಯುವತಿ:** ಹಲೋ ನಾನು ನಮ್ಮಪ್ಪನ ಕಾರ್‌ನಲ್ಲಿ ಬಂದು ಆಗಲೇ ಗಾಂಧಿನಗರದಲ್ಲಿದ್ದೇನೆ. ನೀವು ಇನ್ನೂ ಬಂದೇ ಇಲ್ಲ?
**ಯುವಕ:** ನೀನು ಗಾಂಧಿನಗರದಲ್ಲಿ ಇದ್ದೀಯಾ? ಹಲೋ ಒಮ್ಮೆ ಹಿಂತಿರುಗಿ ನೋಡು ನೀನು ಹೋಗುತ್ತಿರುವ ಬಸ್ಸಿನಲ್ಲಿ ನಾನು ಇದ್ದೇನೆ.

**ಪತಿ:** ಏನೇ ಹೇಳು, ನನ್ನ ತಾಯಿ ಮಾಡುತ್ತಿದ್ದ ಅಡುಗೆಯಂತೆ ನೀನು ಮಾಡುತ್ತಿಲ್ಲ ಕಣೆ.
**ಪತ್ನಿ:** ನೀವೂ ಅಷ್ಟೇ, ನಮ್ಮ ತಂದೆಯವರು ತರುತ್ತಿದ್ದ ಸಂಬಳದಂತೆ ನೀವು ಸಂಬಳ ತರುತ್ತಿಲ್ಲ.




**ಆತ:** ನಾನು ಮದುವೆಯಾದ ಮೇಲೆ ಲಕ್ಷಾಧಿಪತಿಯಾದೆ.
**ಈತ:** ಮೊದಲು ಏನಾಗಿದ್ದೆ?
**ಆತ:** ಮೊದಲು ಕೋಟ್ಯಾಧಿಪತಿಯಾಗಿದ್ದೆ.

ಸಂಗ್ರಹ: ಶಂಕರೇಗೌಡ ತುಂಬಕೆರೆ, ಮಂಡ್ಯ